ಕರ್ನಾಟಕ ವಿಧಾನ ಸಭೆ

**511 ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ)** – ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಹೌಸಿಂಗ್ ಬೋರ್ಡ್, ಬಿಡಿಎ, ಜಲ ಮಂಡಳಿ, ನಗರ ನೀರು ಸರಬರಾಜು ಮಂಡಳಿ ಹಾಗೂ ಬೆಂಗಳೂರು ನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳು ಕೈಗೊಳ್ಳುವ ಯಾವ ಯಾವ ಕಾಮಗಾರಿಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅನುಮತಿಯನ್ನು ಕಡ್ಡಾಯವಾಗಿ ಪಡೆಯಬೇಕಾಗಿದೆ,

ಆ) ಇತ್ತೀಚಿನ ವರ್ಷಗಳಲ್ಲಿ ಇವುಗಳು ಕೈಗೊಳ್ಳುವ ಯಾವುದೇ ಕಾಮಗಾರಿಗಳಿಗೂ ಮಂಡಳಿಯು ಅನುಮತಿ ಪಡೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

**ಮಾನ್ಯ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ

1) ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಬೆಂಗಳೂರು ಪ್ರದೇಶಾಭಿವೃದ್ಧಿ ಮಂಡಳಿಗಳು ಈ ಕೆಳಗಿನ ಕಾಮಗಾರಿ ಚಟುವಟಿಕೆಗಳಿಗೆ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

* ವಸತಿ ಕಟ್ಟಡ ಕಾಮಗಾರಿ – 50 ಮನೆಗಳು ಅಥವಾ 5000 ಚದುರ್ ಮೀಟರ್ ಮೇಲ್ಪಟ್ಟು ಕಟ್ಟಲಾಗುವ ಪ್ರದೇಶ

* ವಸತಿ ಬಡಾವಣೆ–10 ಎಕರೆ ಮೇಲ್ಪಟ್ಟು

* ವಾಣಿಜ್ಯ ಕಟ್ಟಡ –2000 ಚದರ್ ಮೀಟರ್ ಮೇಲ್ಪಟ್ಟು

2) ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗಳು ರೊಚ್ಚು

ನೀರು ಶುದ್ಧೀಕರಣ ಘಟಕ ಸ್ಥಾಪನೆಗೆ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

ಆ) ಇಲ್ಲ

ಇ) ಉದ್ಭವಿಸುವುದಿಲ್ಲ

**1298 ಶ್ರೀ ಸಿದ್ದು ಸವದಿ (ಜಮಖಂಡಿ)** – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಪ ನೋಂದಣಿ ಕಛೇರಿಯನ್ನು ಹೊಸದಾಗಿ ಪ್ರಾರಂಭಿಸಲು ಇರುವ ನಿಯಮಾವಳಿಗಳೇನು,

ಆ) ಜಮಖಂಡಿ ತಾಲ್ಲೂಕಿನಲ್ಲಿ ಬೇರೆ ಕಡೆ ಅಂದರೆ ಹೋಬಳಿ ಮಟ್ಟದಲ್ಲಿ ಉಪ ನೋಂದಣಿ ಕಛೇರಿ ಪ್ರಾರಂಭಿಸಲು ಪ್ರಸ್ತಾವನೆ ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ ಎಲ್ಲಿ ಮತ್ತು ಯಾವಾಗ ಪ್ರಾರಂಭಿಸಲಾಗುವುದು,

ಈ) ರಾಜ್ಯದಲ್ಲಿ ಈ ಬಾರಿ ಎಷ್ಟು ಕಛೇರಿಗಳನ್ನು ಪ್ರಾರಂಭಿಸಲು ಸರ್ಕಾರ ಉದ್ದೇಶಿಸಿರುತ್ತದೆ?

**ಮಾನ್ಯ ಕಂದಾಯ ಸಚಿವರು**

ಅ) ಹೊಸ ಉಪ ನೋಂದಣಿ ಕಛೇರಿಗಳನ್ನು ಸ್ಥಾಪಿಸಲು ಯಾವುದೇ ನಿರ್ದಿಷ್ಟ ನಿಯಮಗಳು ಇರುವುದಿಲ್ಲ ಸಾರ್ವಜನಿಕ ಹಿತದೃಷ್ಟಿ ಹಾಗೂ ಈ ಕೆಳಕಂಡ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಉಪ ನೋಂದಣಿ ಕಛೇರಿಗಳನ್ನು ತೆರೆಯಲು ಪರಿಶೀಲಿಸಲಾಗುತ್ತಿದೆ

1) ಸಂಬಂಧಪಟ್ಟ ವಿಭಾಗದಲ್ಲಿ ನೋಂದಣಿಯಾಗುತ್ತಿರುವ ದಸ್ತಾವೇಜುಗಳ ಸಂಖ್ಯೆ

2) ಸಮೀಪದಲ್ಲಿನ ಉಪ ನೋಂದಣಿ ಕಛೇರಿಗೆ ಇರುವ ಅಂತರ

3) ಹೊಸ ಉಪ ನೋಂದಣಿ ಕಛೇರಿ ತೆರೆಯುವುದರಿಂದಾಗಿ ಸಂಗ್ರಹವಾಗಲಿರುವ ರಾಜಸ್ವ

ಆ) ಹೌದು